


### ಸೊಗಸಾದ ಲೇಖನ

'ವಿಲಾಸಿ ಬೈಕುಗಳ ವಿಹಾರ ಯೋಗ' (ಸುಧಾ, ಮೇ 28) ಜೋಮನ್ ವರ್ಗೀಸ್ ಅವರ ಮುಖಪುಟ ಲೇಖನದಲ್ಲಿ ವಿಲಾಸಿ ಬೈಕ್‌ಗಳು ಹಾಗೂ ಮನಸ್ಸಿಗೆ ಮುದ ನೀಡುವ ಬೈಕ್ ಸವಾರಿ ಕುರಿತು ಲೇಖಕರು ನೀಡಿರುವ ವಿವರ ಸೊಗಸಾಗಿದೆ.

–ಸು. ವಿಜಯಲಕ್ಷ್ಮಿ, ಶಿವಮೊಗ್ಗ, ಕೋಟೀಶ್ವರ ಸೂರ್ಯನಾರಾಯಣರಾವ್, ಬೆಂಗಳೂರು, ಮಹಾದೇವಿ ಟೀಚರ, ಶಿವಮೊಗ್ಗ, ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

### ವಿಪರ್ಯಾಸ

ಪರಿಸರ ಎಂಜಿನಿಯರಿಂಗ್ ಕಲಿಯುತ್ತಿರುವ ಸುಪ್ರಿಯಾ ಚೆಟ್ಟಿ ಅವರಿಗೆ ಪರಿಸರ ಮಾಲಿನ್ಯ ಹೆಚ್ಚಿಸುವ ಬೈಕ್ ರೈಡಿಂಗ್‌ನಲ್ಲಿ ಆಸಕ್ತಿ. ಎಂಥ ವಿಪರ್ಯಾಸ!

–ಸಿ.ಎಸ್. ಆರಾಧ್ಯ, ಮೈಸೂರು

### ಅರ್ಥವತ್ತಾಗಿದೆ

ವಿಚಾರಲಹರಿಯಲ್ಲಿ ಮೂಚಿ ಅವರು 'ನಾಸ್ತಿಕತೆ ಮತ್ತು ನೈತಿಕತೆ' ಕುರಿತು ಅರ್ಥವತ್ತಾಗಿ ವ್ಯಾಖ್ಯಾನಿಸಿದ್ದಾರೆ.

–ಪ್ರದೀಪ್ ಎನ್. ಚೆಲುವರಸನಕೊಪ್ಪಲು

### ಖಾಲಿತನ ತುಂಬಿದೆ

ವೈನತೇಯರ ವಿದಾಯದಿಂದ ವಿಚಾರಲಹರಿ ಅಂಕಣ ಮುಂದೇನು ಎಂಬ ವಿಷಾದದಲ್ಲಿದ್ದ ನನಗೆ ತೋಷ ಅವರ ಬರಹ ಓದುವಾಗ ವೈನತೇಯರಿಂದ ತೆರವಾದ ಖಾಲಿತನವನ್ನು ತೋಷ ತುಂಬಿದ್ದಾರೆ ಎನಿಸಿತು.

–ಕೇಶವ ಪ್ರಭು, ಶಿವಮೊಗ್ಗ

### ಮೊದಲಿನಂತೆಯೇ ಇದೆ

'ನಿಮ್ಮೊಡನೆ' ಯಲ್ಲಿ ಬಿ.ಎಂ. ಹನೀಫ್ ಅವರು 'ಪೊಲೀಸ್ ಪಡೆಯಲ್ಲಿ ಲಿಂಗ ತಾರತಮ್ಯ' ಕುರಿತು ಬಹಳ ಚೆನ್ನಾಗಿ ಬರೆದಿದ್ದಾರೆ. ಗಂಡು ಹೆಣ್ಣು ಸಮಾಜದಲ್ಲಿ ಸರಿಸಾಟಿಯಾಗಿ ಎಲ್ಲ ರಂಗಗಳಲ್ಲಿ ದುಡಿಯುತ್ತಲೇ ಇದ್ದರೂ, ಅಧಿಕಾರವರ್ಗದ ಆಲಸ್ಯದ ಧೋರಣೆಯಿಂದ ಪೊಲೀಸ್ ಕ್ಷೇತ್ರದಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯದ ಕೊರತೆ ಮೊದಲಿನಂತೆಯೇ ಇದೆ ಎಂಬುದು ಸತ್ಯ.

– ನಾಗೇಶ್ ಕುಮಾರ್ ಸಿ.ಎಸ್. ಚೆನ್ನೈ

### ಬದಲಾದ ಬೇಸಿಗೆ ಶಿಬಿರ

'ಬಾಲ್ಯದಲ್ಲಿ ನಮ್ಮ ಬೇಸಿಗೆ ಶಿಬಿರ' (ಅಮರೇಶ ನುಗಡೋಣಿ) ಅವರ ಲೇಖನ ಓದಿದಾಗ ನಮ್ಮ ಬಾಲ್ಯದ ದಿನಗಳು ನೆನಪಿಗೆ ಬಂದವು. ಈಗಿನ ಮಕ್ಕಳ ಅಭಿರುಚಿ ಬದಲಾಗಿದೆ. ರಜೆ ಬಂದರೆ ಲ್ಯಾಪ್‌ಟಾಪ್, ವೀಡಿಯೊ ಗೇಮ್‌ಗಳತ್ತ ಗಮನ ಹರಿಸುವ ಮಕ್ಕಳಿಗೆ ಹಳ್ಳಿಯ ಸೊಗಡಿನ ಅರಿವಿಲ್ಲ.

–ಸುಂದರ್, ಬೆಂಗಳೂರು, ಎಚ್. ಆನಂದಕುಮಾರ್, ಚಿತ್ರದುರ್ಗ, ಕೊಹಿಮ, ಬಸರಕೋಡು

### ಮರಳಿ ಬಂದ ಬಾಲ್ಯ

ನುಗಡೋಣಿ ಅವರ ಲೇಖನ ಕಾವೇರಿ ತೀರದ ನನ್ನ ಹುಟ್ಟೂರಿನ ಆರು ದಶಕಗಳಿಗೂ ಹಿಂದಿನ ಬಾಲ್ಯವನ್ನು ನೆನಪಿಸಿತು. ಉಚಿತವಾಗಿ ದೊರಕುತ್ತಿದ್ದ ಈ ಎಲ್ಲ ಸಂತೋಷಗಳು ಈಗ ಹಣಕ್ಕೂ ಸಿಗುವುದಿಲ್ಲ ಎಂಬ ವಿಷಾದವೂ ಉಂಟಾಯಿತು.

–ಡಾ.ಕೆ.ಕೆ. ಜಯಚಂದ್ರಗುಪ್ತ, ಹಾಸನ

### ಉಪಯುಕ್ತ ಲೇಖನ

'ಕ್ರಿಯಾಶೀಲ ಆಗುವ ಬಗೆ ಹೇಗೆ' ಎಸ್.ಜಿ. ಶಿವಶಂಕರ್ ಅವರ ವ್ಯಕ್ತಿತ್ವ ವಿಕಸನ ಲೇಖನ ಉಪಯುಕ್ತ ಮಾಹಿತಿ ನೀಡಿದೆ.

–ವೈ.ಜಿ. ನರಸಿಂಹನ್, ಶಿವಮೊಗ್ಗ

### ಪ್ರವಾಸ ಲೇಖನ ಚೆನ್ನಾಗಿದೆ

ಡಾ.ಜಿ. ಬಾಲಕೃಷ್ಣ ಅವರು ಬರೆದ ಪ್ರವಾಸ ಲೇಖನ 'ಸಿಂಧೂ ಸನ್ನಿಧಿಯಲ್ಲಿ ಲೋಥಲ್' ಚೆನ್ನಾಗಿದೆ.

–ಬಿ.ಎನ್. ಸೊಲ್ಲಾಪುರೆ, ಔರಾದ

### ಉತ್ತಮ ವಿಶ್ಲೇಷಣೆ

'ಕಾನೂನನ್ನು ಮಹಿಳೆ ಹೇಗೆ ಬಳಸಿಕೊಳ್ಳಬೇಕು?' (ಮಂಜುಕನ್ನಿಕಾ) ಲೇಖನದಲ್ಲಿ ಮಹಿಳೆಯ ರಕ್ಷಣೆಗಾಗಿ, ಅವಳನ್ನು ಶೋಷಿಸುವವರನ್ನು ಶಿಕ್ಷಿಸುವ ಸಲುವಾಗಿ ಕಾನೂನುಗಳು ರೂಪಿತಗೊಂಡಿದ್ದರೂ ಅವುಗಳ ಲಾಭ ಪಡೆಯಲು ಮಹಿಳೆ ಹೇಗೆ ವಿಫಲಳಾಗುತ್ತಾಳೆ ಎಂಬುದನ್ನು ಚೆನ್ನಾಗಿ ವಿಶ್ಲೇಷಿಸಲಾಗಿದೆ.

–ರೇಷ್ಮಾ ಎ.ಎಸ್. ಬಾಳೆಹೊನ್ನೂರು

### ಪ್ರಯೋಜನಕಾರಿ

'ಹೃದಯಾಘಾತಕ್ಕೆ ಅಂಜದಿರಿ' (ಡಾ. ಕರುಣಾಕರ ಬಂಗೇರ) ಲೇಖನ ಹೃದ್ರೋಗಿಗಳಿಗೆ ಪ್ರಯೋಜನಕಾರಿ. ನಿಯಮಿತವಾದ ಆಹಾರ ಸೇವನೆ, ವ್ಯಾಯಾಮ, ಜಾಗಿಂಗ್, ನಡಿಗೆಗಳಿಂದ ದೇಹದ ತೂಕ ನಿಯಂತ್ರಣಕ್ಕೆ ತಂದು ಹೃದಯಾಘಾತದಿಂದ ಹೇಗೆ ಪಾರಾಗಬಹುದು ಎಂಬುದನ್ನು ವೈದ್ಯರು ಚೆನ್ನಾಗಿ ವಿವರಿಸಿದ್ದಾರೆ.

–ರವೀಂದ್ರನಾಥ ಶಿ. ಯಡಹಳ್ಳಿ, ಬೆಟ್ಟಹಳ್ಳಿ ಗೋಪಿನಾಥ್, ಸೂಲಿಬೆಲೆ

### ಕಥೆಗಳು ಸೊಗಸಾಗಿವೆ

ಅದೀಬ್ ಅಖ್ತರ್ ಅವರ 'ಋಣಮುಕ್ತ' ಮತ್ತು ಗಂಗಾಧರನ್ ಅವರ ಅನುವಾದಿತ ಕಥೆ 'ಅಮ್ಮನ ಶವಪೆಟ್ಟಿಗೆ' ಸೊಗಸಾಗಿವೆ.

–ಎಸ್. ಪ್ರಭಾ, ಬೆಂಗಳೂರು, ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ

### ವಾಚಕರನ್ನು ಸೆಳೆಯುವ ಪುಟ

'ಸೆಲೆಬ್ರಿಟಿ' ಪುಟ ಯಾವಾಗಲೂ ವಾಚಕರನ್ನು ಸೆಳೆಯುತ್ತದೆ. ಸುಧಾ ಕೈಗೆ ಸಿಕ್ಕ ತಕ್ಷಣ ಹಿಂದುಗಡೆಯಿಂದ ಪುಟ ತೆಗೆದು ಓದಲಾರಂಭಿಸುತ್ತೇನೆ. ಸೆಲೆಬ್ರಿಟಿಗಳ ಬಗ್ಗೆ ನಮಗೆ ಗೊತ್ತಿಲ್ಲದ ಮಾಹಿತಿಯನ್ನು ಸಮಗ್ರವಾಗಿ 'ಹನಿ' ಅವರು ಓದುಗರಿಗೆ ನೀಡುತ್ತಿದ್ದಾರೆ.

–ಎಲ್.ಗಿರಿಜಾರಾಜ್, ಬೆಂಗಳೂರು



ಶ್ರೀ ಸಾಯಿ ಕೃಪಾ
ಜ್ಯೋತಿಷ್ಯ ಕೇಂದ್ರ



ದಕ್ಷಿಣ ಕನ್ನಡದ ಸುಪ್ರಸಿದ್ಧ ಜ್ಯೋತಿಷ್ಯರು
ಶ್ರೀ ರಾಘವ ದೀಕ್ಷಿತ್
ಶ್ರೀ ರಾಜರಾಜೇಶ್ವರಿ ಉಪಾಸಕರು
ಆರೂಡ ಶಾಸ್ತ್ರ ಜಾತಕ ಅಷ್ಟಮಂಗಲ ಪ್ರಶ್ನೆ ಮೂಲಕ ನಿಮ್ಮ ಜೀವನದ ಸಂಪೂರ್ಣ ಭವಿಷ್ಯವನ್ನು ನಿಖರವಾಗಿ ನುಡಿಯುತ್ತಾರೆ
ದಾಂಪತ್ಯ ಕಲಹ, ಮದುವೆ, ಸಂತಾನ, ಸ್ತ್ರೀವಶೀಕರಣ, ಪುರುಷ ವಶೀಕರಣ, ಶತ್ರುನಾಶ, ಸಾಲಭಾದೆ, ಗೃಹಕಲಹ, ಉದ್ಯೋಗದಲ್ಲಿ ಅಡೆತಡೆ, ಮಕ್ಕಳ ಸಮಸ್ಯೆ, ಕುಜದೋಷ, ಲೈಂಗಿಕ,ರಾಜಕೀಯ ಯೋಗ, ಜನವಶ, ವ್ಯಾಪಾರಭಿವೃದ್ಧಿ, ಮಾನಸಿಕ ಚಿಂತೆ, ಅನಾರೋಗ್ಯ, ಮಾಟ-ಮಂತ್ರ ಸಮಸ್ಯೆಗಳಿಗೆ ಕೇರಳದ ಮಂತ್ರದೇವತೆ ಶ್ರೀಕುಟ್ಟಿ ಚೇತನ್ ಭಗವತಿಯ ಅತೀಂದ್ರಿಯ ಪೂಜಾಶಕ್ತಿಯಿಂದ ಹಾಗೂ ವಿದ್ವೇಶಣ ಸ್ತಂಬನ ದಿಗ್ಬಂಧನ ಸಂಮೋಹನ ವಶೀಕರಣದಂತಹ ಬಲಿಷ್ಟ ಪ್ರಯೋಗದ ಮೂಲಕ ನಿಮ್ಮ ಜೀವನದ ಯಾವುದೇ ಘೋರ ನಿಗೂಢ ಗುಪ್ತ ಸಮಸ್ಯೆಗಳಿದ್ದರೂ 3 ದಿನದಲ್ಲಿ
100% ಶಾಶ್ವತವಾಗಿ ಅಂತಿಮ ಪರಿಹಾರ
ಶತಸಿದ್ಧಿ ನಿಮ್ಮ ಎಲ್ಲಾ ವಿಷಯಗಳು ರಹಸ್ಯವಾಗಿರುತ್ತದೆ ಚಿಂತಿಸಬೇಡಿ ಸಂಪರ್ಕಿಸಿ:
ಫೋನಿನ ಮೂಲಕ ವಿವರ ಪಡೆಯಿರಿ
9880855585
ನೀವು ಎಷ್ಟೋ ಜ್ಯೋತಿಷ್ಯರಲ್ಲಿ ದೈವದಲ್ಲಿ ಕಂಡು ಕೇಳಿ ಅಲ್ಲಿ ಇಲ್ಲಿ ಸುತ್ತಾಡಿ ಮನ ನೊಂದಿದರೆ ನಿಮ್ಮ ಸಮಸ್ಯೆಗೆ ಅಂತಿಮ ಪರಿಹಾರಕ್ಕೆ ಒಮ್ಮೆ ಭೇಟಿಕೊಡಿ
ಮನೆ ವಿಳಾಸ: ಮೀರಾ ನಿವಾಸ
ಶ್ರೀ ಸಾಯಿ ಮಂದಿರದ ಎದುರು,
ಶಾಂತಿ ಸಾಗರ್‌ಹೋಟೆಲ್ ಪಕ್ಕ, ಶೇಷಾದ್ರಿಪುರಂ
ಕಾಲೇಜು ಹತ್ತಿರ, ಶೇಷಾದ್ರಿಪುರಂ ಬೆಂಗಳೂರು